*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*
*ಪ್ರೀತಿಯ ತೂಕ ಮಾಡಲು ಎಂತಹ ತಕ್ಕಡಿ ಬೇಕು?*



ಬೆಪ್ಪುತಕ್ಕಡಿ!

*ನಾರಾಯಣ, ಗುಗ್ಗರಹಟ್ಟಿ*
*ಅಂತಹ ರಣರಂಗದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಭಗವದ್ಗೀತೆ ಬೋಧಿಸಲು ಸಮಯವೆಲ್ಲಿತ್ತು?*
ಇತ್ತಲ್ಲಾ, ಅದು ಯುದ್ಧವೆಂಬ ಪರೀಕ್ಷೆಗೆ ಮುನ್ನ ಕೃಷ್ಣ ತೆಗೆದುಕೊಂಡ ಕ್ರ್ಯಾಷ್ ಕೋರ್ಸ್! ಕೊರೆತದ ನಂತರವೇ ಇರಿತ ಆರಂಭವಾಗಿದ್ದು!

*ಬಿ.ಎಸ್.ಮುಳ್ಳೂರ್, ಹಲಗತ್ತಿ*
*ಹುಟ್ಟು ಸಾವಿನಲ್ಲಿರುವ ವ್ಯತ್ಯಾಸಗಳು ಏನು?*
ಹುಟ್ಟಿಗೆ ವೈದ್ಯನ ಅಗತ್ಯವಿಲ್ಲ, ಆದರೆ ಸತ್ತ ಎಂದು ವೈದ್ಯ ಸಹಿ ಹಾಕುವವರೆಗೆ ವ್ಯಕ್ತಿ ಸತ್ತರೂ ಸಾಯಲಾಗುವುದಿಲ್ಲ!

*ಲಕ್ಷ್ಮೀನರಸಿಂಹ, ಚಾಮರಾಜನಗರ*
*ಶಾಸಕರಿಗೆ 'ಅನರ್ಹ' ಎಂಬ ಪದದ ಬಳಕೆ ಸರಿಯೆ?*




ಏನೇನೂ ಲಂಚ ಮುಟ್ಟದಿದ್ದರೆ ರಾಜಕೀಯ ವಲಯಗಳಲ್ಲಿ ಹೀಗೆನ್ನಬಹುದು!

*ಆರ್. ಮಧುಸೂದನ್, ಹಾಸನ*
*ಯಾವ ಟ್ಯೂಷನ್‌ಗೂ ಹೋಗದೆ 'ಪ್ರೇಮ ಪರೀಕ್ಷೆ'ಗೆ ಕುಳಿತುಕೊಳ್ಳುವವರಿಗೆ ನಿಮ್ಮ ಸಲಹೆ?*
ರನ್ನಿಂಗ್ ಪ್ರಾಕ್ಟೀಸ್ ಮಾಡಿರಿ; ಓಡಿಹೋಗಿ ಮದುವೆಯಾಗಲು ಸಹಾಯಕವಾಗುತ್ತದೆ!

*ವಿ. ಹಮೀದ್, ವಿಟ್ಲ*
*ರಾಜಕೀಯ ಹೊಲಸು ಎಂದು ಗೊತ್ತಿದ್ದೂ ಜನ ಅದನ್ನು ಸೇರುವುದೇಕೆ ಸಾರ್?*
ಕೀಟಗಳಿಗೆ ಮತ್ತು ಹಂದಿಗಳಿಗೆ ಹೊಲಸು ಪ್ರಿಯ ಹಮೀದ್.

*ಪಿ. ಚಿದಾನಂದ, ಕೆಂಚೇನಹಳ್ಳಿ*
*ಆರ್ಥಿಕ ಅಸಮಾನತೆಯಿಂದ ಮುಕ್ತವಾದ ಭಾರತವನ್ನು ಯಾವಾಗ ನೋಡಬಹುದು?*
ಈಗಲೇ; ಉಪೇಂದ್ರನ ಚಲನಚಿತ್ರಗಳಲ್ಲಿ!

*ಗೀತಾ ಬರ್ಲ, ಬೆಂಗಳೂರು*
*ಬೆಟ್ಟದಷ್ಟು ದೊಡ್ಡ ತಪ್ಪು ಮಾಡಿದರೂ ತಾವು ಮಾಡಿದ್ದೇ ಸರಿ ಎನ್ನುವ ಈ ರಾಜಕಾರಣಿಗಳಿಗೆ ನಾಚಿಕೆ ಇಲ್ಲವೆ?*
ನಾಯಿ, ನರಿ, ಊಸರವಳ್ಳಿ, ಗೂಬೆ, ಕಪ್ಪೆಗಳಿಗೆ ನಾಚಿಕೆ ಎಂದರೇನೆಂದು ತಿಳಿದಿರುವುದಿಲ್ಲ ಮೇಡಮ್!

*ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ಹೆಂಡತಿಯರಿಲ್ಲದ ಮನೆ ತಂತಿಯಿಲ್ಲದ ವೀಣೆಯಂತೆ?*
ಊಹೂಂ; ಕುಯ್ಯುವವರಿಲ್ಲದ ಪಿಟೀಲಿನಂತೆ!

*ಎಸ್.ಶ್ರೀಧರ್, ಬೆಂಗಳೂರು*
*ರಾಜಕಾರಣ ಎಂದರೇನು?*
ಹಣ, ರಣ, ಹರಣ, ಹಗರಣಗಳನ್ನು ರಾಜಾರೋಷವಾಗಿ ಮಾಡುವುದೇ ರಾಜಕಾರಣ!

*ಕೇಶವ ಎನ್. ಪೈ, ಹೊನ್ನಾವರ*
*ಹೊಸ ಸಂಶೋಧನೆಗಳ ಪ್ರಯೋಗಕ್ಕೆ ಇಲಿಗಳನ್ನೇ ಏಕೆ ಬಳಸುತ್ತಾರೆ?*
ಹಾಗೇನಿಲ್ಲ; ಹೊಸರುಚಿಯ ಪ್ರಯೋಗ ಎಂದಿಗೂ ಪತಿಯ ಮೇಲೇ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಸಿಂಹಕಟಿಗೂ, ಗಜಕಟಿಗೂ ಇರುವ ವ್ಯತ್ಯಾಸ?*
ಸುಮಾರು 14 ಇಂಚುಗಳು.

*ಹಾಡ್ಯ ಜಯಾನಂದ, ಮೈಸೂರು*
*ಧೃತರಾಷ್ಟ್ರ ಕುರುಡನಾಗಿಲ್ಲವಾಗಿದ್ದರೆ ಮಹಾಭಾರತವೇ ನಡೆಯುತ್ತಿರಲಿಲ್ಲ ಎನ್ನುತ್ತಾರಲ್ಲ?*
ಏಕೆ? ಕಣ್ಣಿದ್ದಿದ್ದರೆ ದುರ್ಯೋಧನನ ಛಲವನ್ನು ಅಡಗಿಸುತ್ತಿದ್ದನೇನು? ಮಹಾಭಾರತಕ್ಕೆ ದುರ್ಯೋಧನನ ಛಲವೇ ಅಡಿಪಾಯ!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ದೇವರು ಹೆಣ್ಣಿನ ಬಾಯಿಗೆ ಬೀಗ ಹಾಕುವ ವ್ಯವಸ್ಥೆ ಮಾಡಿದ್ದಿದ್ದರೆ?*
ಪ್ರತಿ ಅತ್ತೆಯ ಬಾಯಿಯ ಬೀಗದ ಕೈಯನ್ನು ಸೊಸೆ ಕಳೆದುಹಾಕುತ್ತಿದ್ದಳು!

## ಬಹುಮಾನಿತ ಪ್ರಶ್ನೆ

*ನೆ.ಸು. ಆನಂದ್, ಬೆಂಗಳೂರು*
*ತೂಕಡಿಸುವುದಕ್ಕೂ, ಆಕಳಿಸುವುದಕ್ಕೂ ಅಂತರವೇನು ಗುರುವರ್ಯಾ?*
ನಿದ್ರಾವಿದ್ಯೆಯಲ್ಲಿ ಆಕಳಿಕೆ ಪಿಯುಸಿ; ತೂಕಡಿಕೆ ಪದವಿ, ಗೊರಕೆ ಸ್ನಾತಕೋತ್ತರ!

*ಖಲಂದರ್ ಅಖೀಲುಝ್ ಜಾವಗಲ್, ಮಂಗಳೂರು*
*ಹೆಣ್ಣು, ಹೆಂಡ, ಮಣ್ಣಿಗಾಗಿ ಜನ ಬಾಯಿಬಿಡುವುದೇಕೆ ಸಾರ್?*
ಬಿಡಬೇಕಾದ್ದೇ– ಚಪಲಕ್ಕಾಗಿ ಹೆಣ್ಣಿಗೆ, ಹೆಣ್ಣು ಸಿಗದಾಗ ಹೆಂಡಕ್ಕೆ, ಹೆಂಡ ಅತಿಯಾಗಿ ಅಂತ್ಯವಾದಾಗ ಮಣ್ಣಿಗೆ!

*ಹೆಚ್.ಎಸ್.ವಿಶ್ವನಾಥ್, ಶಿವಮೊಗ್ಗ*
*ಒಟ್ಟಿಗೆ 100 ಪ್ರಶ್ನೆಗಳನ್ನು ಕಳುಹಿಸುತ್ತೇನೆ, ನಿಮಗೆ ಪುರುಸೊತ್ತಾದಾಗ ಉತ್ತರಿಸಿ; ಆಗಬಹುದೆ ರಾಮ್‌ಜೀ?*
ಬೇಡ, ಅಂಚೆ ಇಲಾಖೆಗೆ ನಷ್ಟವಾಗುತ್ತದೆ; 100 ವಾರ 100 ಕಾರ್ಡ್ ಮೂಲಕ 100ಪ್ರಶ್ನೆ ಕಳುಹಿಸುವುದೇ ಸರಿ!

*ವಿ.ಜಿ. ಹೆಗ್ಡೆ, ಭೈರುಂಬೆ*
*ರಾಜಕಾರಣಿಗಳ ಭಾಷಣ ಟೊಳ್ಳೆಂದು ಗೊತ್ತಿದ್ದರೂ ಕಿಕ್ಕಿರಿದು ಜನ ಸೇರುವ ಕಾರಣವೇನು?*
ಕಪಟ ನಾಟಕದ ಡೈಲಾಗ್‌ಗಳನ್ನು ಕೇಳಿ ಆನಂದಿಸಲು!

*ಜಾಕೋಬ್ ಡಿಸೋಜ, ಕುರುವಳ್ಳಿ*
*ನಾರಿ ಮುನಿದರೆ ಮಾರಿ; ಹೋರಿ ಮುನಿದರೆ?*
ಗೋರಿ!

*ರಾಘವೇಂದ್ರ ದೇಸಾಯಿ, ರಾಯಚೂರು*
*ಈ ಕಾಲದ ಹೆಂಗಸರು ಜಡೆಯನ್ನು ಕಟ್ಟದೆ ಮುಡಿಯನ್ನು ಬಿಡುವ ಉದ್ದೇಶ?*



ಶಾಂಪೂ ಜಾಹೀರಾತಿನ ಸುಂದರಿಯರಂತೆ ಕಾಣುವ ಆಸೆ!